**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎ. ಶರವಣ ರವರು ನಿಯಮ 72ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

ಪ್ರಶ್ನೆ: ಬೆಂಗಳೂರಿನಲ್ಲಿ ಇತ್ತೀಚೆಗೆ ಅನೇಕ ಪೊಲೀಸ್ ಠಾಣೆಯಲ್ಲಿ ಚಿನ್ನದ ರಿಕವರಿ ಮಾಡುವ ನೆಪದಲ್ಲಿ ಪೊಲೀಸರು ಅವರಿಗೆ ಕಿರುಕುಳ ನೀಡಿರುತ್ತಾರೆ. ಹಾಗೂ ಅವರ ಮನೆಯವರಿಗೂ ಬೆದರಿಸುತ್ತಿದ್ದಾರೆ, ಇಂತಹ ಘಟನೆಗಳು ತುಂಬಾ ಅಮಾನವೀಯವಾಗಿರುತ್ತವೆ. ಪೊಲೀಸ್‌ನವರ ನಡಾವಳಿಕೆಯಿಂದಾಗಿ ಮನನೊಂದು ಅನೇಕರು ಮಾನಸಿಕ ಖಿನ್ನತೆಗೆ ಒಳಗಾಗುತ್ತಿದ್ದಾರೆ. ರಿಕವರಿ ಮಾಡುವಾಗ ಯಾವ ಕ್ರಮವನ್ನು ಅನುಸರಿಸಬೇಕೆಂಬುದನ್ನು ಪೊಲೀಸ್ ಪ್ರಧಾನ ಕಛೇರಿಯ ಸುತ್ತೋಲೆ ಪತ್ರ ಸಂಖ್ಯೆ: ಜಿಸಿ-18/ಎಸ್.ಹೆಚ್.ಆರ್.ಸಿ/2007, ದಿನಾಂಕ: 19.02.2008 ಹಾಗೂ ಸಂಖ್ಯೆ: ಅಪರಾಧ-3/187/2018, ದಿನಾಂಕ: 06.03.2019 ನಿರ್ದಿಷ್ಟ ಕಾರ್ಯ ವಿಧಾನದಂತೆ (Standard Operation Procedure) ರಲ್ಲಿ ವಿವರವಾಗಿ ತಿಳಿಸಲಾಗಿದೆ. ಮತ್ತು ಮಾನ್ಯ ಉಚ್ಚ ನ್ಯಾಯಾಲಯವು WP No. 3453/21, ದಿನಾಂಕ: 08.07.2021 ರಂದು ನೀಡಿರುವ ಸೂಚನೆಯಂತೆ ರಿಕವರಿ ಕಾರ್ಯ ಮಾಡಬೇಕೆಂದು ಸೂಚನೆ ನೀಡಿರುತ್ತದೆ, ಆದಾಗ್ಯೂ ಸಹ ಕೆಲವು ಪೊಲೀಸ್ ಅಧಿಕಾರಿಗಳು ತಮಗೆ ಮನಸ್ಸಿಗೆ ತೋಚಿದಂತೆ ಗಿರವಿ ಮತ್ತು ಚಿನ್ನದ ಅಂಗಡಿ ಮಾಲೀಕರಿಗೆ ಕಿರುಕುಳ ನೀಡುತ್ತಿದ್ದಾರೆ. ಈ ಬಗ್ಗೆ ನಾನು ಸದನದಲ್ಲಿ ಇದೇ ವಿಷಯವನ್ನು 20.02.2023 ರಂದು ಪ್ರಸ್ತಾಪಿಸಿದ್ದೆ, ಅಂದಿನ ಗೃಹ ಸಚಿವರು ಅಮಾಯಕರಿಗೆ ತೊಂದರೆ ಕೊಡದಂತೆ ಒಂದು ಸುತ್ತೋಲೆಯನ್ನು ಶೀಘ್ರವಾಗಿ ಹೊರಡಿಸಲಾಗುವುದೆಂದು ಇದೇ ಸದನದಲ್ಲಿ ಭರವಸೆ ನೀಡಿದ್ದರು. ಅದು ಕೇವಲ ಭರವಸೆಯಾಗಿಯೇ ಉಳಿತು ಹೊರತು ಸುತ್ತೋಲೆ ರೂಪದಲ್ಲಿ ಹೊರ ಬರಲಿಲ್ಲ. ಇಂದಿಗೂ ಕೂಡಾ ಪೊಲೀಸ್ ಅಧಿಕಾರಿಗಳು ರಿಕವರಿ ನೆಪದಲ್ಲಿ ರಾಜ್ಯಾದ್ಯಂತ ಗಿರವಿ ಮತ್ತು ಚಿನ್ನದ ಅಂಗಡಿ ಮಾಲೀಕರಿಗೆ ತುಂಬಾ ಕಿರುಕುಳ ಕೊಡುತ್ತಿದ್ದಾರೆ. ಆದುದರಿಂದ, ಈ ಶೋಷಣೆಯನ್ನು ತಡೆಯಲು ಪೊಲೀಸ್ ಇಲಾಖೆಗೆ ಕಟ್ಟುನಿಟ್ಟಿನ ಆದೇಶ ನೀಡುವ ಕುರಿತು.

ಉತ್ತರ: ಬೆಂಗಳೂರು ನಗರದಲ್ಲಿ ಗಿರವಿ ಅಂಗಡಿ ಹಾಗೂ ಚಿನ್ನದ ಅಂಗಡಿ ಮಾಲೀಕರಿಗೆ ರಿಕವರಿ ನೆಪದಲ್ಲಿ ಪೊಲೀಸರು ಯಾವುದೇ ಕಿರುಕುಳ ನೀಡುತ್ತಿರುವುದಿಲ್ಲ. ಪೊಲೀಸ್ ಪ್ರಧಾನ ಕಚೇರಿಯ ಸುತ್ತೋಲೆ ಪತ್ರ ಸಂಖ್ಯೆ ನಂ.ಜಿಸಿ-18/ಎಸ್‌ಹೆಚ್‌ಆರ್‌ಸಿ/2007 ದಿನಾಂಕ 19.02.2008 ಹಾಗೂ ಸಂಖ್ಯೆ ಅಪರಾಧ-3/187/2018 ದಿನಾಂಕ: 06.03.2019 ರಲ್ಲಿ ಸೂಚಿಸಿರುವ ನಿರ್ದಿಷ್ಟ ಕಾರ್ಯ ವಿಧಾನದಂತೆ (Standard Operation Procedure) ಚಿನ್ನ ಬೆಳ್ಳಿ ಆಭರಣಗಳನ್ನು ಜಪ್ತಿ ಮಾಡುವಾಗ ನಿರ್ವಹಿಸಬೇಕಾದ ಅನುಸರಣಾ ಕ್ರಮಗಳ ಬಗ್ಗೆ ಸೂಚಿಸಿರುವಂತೆ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ WP 3453/21 Dated 08.07.2021 ರ ಸೂಚನೆಯಂತೆ ಕಾರ್ಯನಿರ್ವಹಣೆ ಮಾಡಲು ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರ ಪತ್ರ ಸಂಖ್ಯೆ: ಸಿ.ಸಿ.ಆರ್.ಬಿ.ಡಬ್ಲೂಪಿ/3453/2021, ದಿನಾಂಕ: 27-08-2021ರಲ್ಲಿ ಮತ್ತೊಮ್ಮೆ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೆ ಸೂಕ್ತ ತಿಳುವಳಿಕೆಯನ್ನು ನೀಡಿರುತ್ತದೆ. ಯಾವುದೇ ಪೊಲೀಸ್ ಅಧಿಕಾರಿ/ಸಿಬ್ಬಂದಿಯವರು ಮೇಲ್ಕಂಡ ಸೂಚನೆಗಳನ್ನು ಪಾಲಿಸದೇ/ಅನುಸರಿಸದೆ ಇದ್ದಲ್ಲಿ ಸೂಕ್ತ ಇಲಾಖಾ ಶಿಸ್ತು ಕ್ರಮ ಜರುಗಿಸಲಾಗುವುದು.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ರವರ ಪತ್ರದ ಸಂಖ್ಯೆ ಅಪರಾಧ-3/187/2018, ದಿನಾಂಕ: 06-03-2019 ರಂದು ನಿರ್ಧಿಷ್ಟ ಕಾರ್ಯ ವಿಧಾನಗಳ (Standard Operating Procedure) ಬಗ್ಗೆ ಈ ಕೆಳಕಂಡಂತೆ ವಿಧಾನಗಳನ್ನು ಅನುಸರಿಸುವಂತೆ ಆದೇಶವನ್ನು ಹೊರಡಿಸಿರುತ್ತಾರೆ.

1. ಆರೋಪಿಯ ದಸ್ತಗಿರಿ ಸಮಯದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನವನ್ನು ಸಂಪೂರ್ಣವಾಗಿ ಪಾಲಿಸುವುದು.

2. ಕಲಂ: 27 ಇಂಡಿಯನ್ ಎವಿಡೆನ್ಸ್ ಕಾಯ್ದೆ ಅಡಿಯಲ್ಲಿ ಆರೋಪಿತನ ಸ್ವ-ಇಚ್ಛಾ ಹೇಳಿಕೆಯನ್ನು ಪಡೆಯುವಾಗ ವಿಡಿಯೋಗ್ರಾಫ್ ಮಾಡಿಸುವುದು. ಸ್ವ-ಇಚ್ಛಾ ಹೇಳಿಕೆ ಪಡೆಯುವ ಸಮಯದಲ್ಲಿ ಕಡ್ಡಾಯವಾಗಿ ಪಂಚರ ಸಮಕ್ಷಮ ಪಡೆಯುವುದು. ವಿಡಿಯೋ ಗ್ರಾಫನ್ನು ಮಾಲು ಪಟ್ಟಿಯಲ್ಲಿ ಅಳವಡಿಸಿ ದೋಷಾರೋಪಣಾ ಪತ್ರದಲ್ಲಿ ಲಗತ್ತಿಸುವುದು.

3. ಆರೋಪಿತನು ಒಂದು ಕಡೆಗಿಂತ ಹೆಚ್ಚು ಕಡೆಗಳಲ್ಲಿ ಕಳ್ಳತನ/ರಾಬರಿ/ಡಕಾಯಿತಿ ಮಾಡಿರುವ ಬಗ್ಗೆ ಹೇಳಿಕೆ ನೀಡಿದಲ್ಲಿ, ಸಂಬಂಧಿಸಿದ ಸ್ಥಳಗಳ ಪರಿಶೀಲನೆಯನ್ನು ಕಡ್ಡಾಯವಾಗಿ ಮಾಡಿ ಕೃತ್ಯವೆಸಗಿರುವುದು ಖಾತ್ರಿಯಾದ ನಂತರ ಸದರಿ ಸ್ಥಳದ ಪಂಚನಾಮೆಯನ್ನು ಜರುಗಿಸುವುದು.

4. ಆರೋಪಿತನ ಹೇಳಿಕೆಯನ್ನು ಆಧರಿಸಿ ಪರಿಶೀಲಿಸಿದ ಸ್ಥಳಗಳಲ್ಲಿ ನಡೆದ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಸದರಿ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಪ್ರಥಮ ವರ್ತಮಾನದ ವರದಿಗಳನ್ನು ಸಂಗ್ರಹಿಸತಕ್ಕದ್ದು.

5. ಆರೋಪಿತನು ತಾನು ಕಳವು ಮಾಲನ್ನು ಸ್ವೀಕರಿಸಿದವರ ಕುರಿತು ಮಾಹಿತಿಯನ್ನು ನೀಡುವಾಗ ಅವನು ಸತ್ಯವನ್ನು ಹೇಳುತ್ತಿದ್ದಾನೆಯೇ ಎಂಬ ಬಗ್ಗೆ ವಿವಿಧ ಕೋನಗಳಿಂದ ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳುವುದು.

6. ಆರೋಪಿತನು ನೀಡಿದ ಸ್ವ-ಇಚ್ಛಾ ಹೇಳಿಕೆ ಮತ್ತು ಕಳವು ಮಾಲನ್ನು ಸ್ವೀಕರಿಸಿದ ವ್ಯಕ್ತಿಗಳ ಮಾಹಿತಿಯನ್ನು ಒಳಗೊಂಡ ಪೂರ್ಣ ವಿವರಗಳನ್ನು ತನಿಖಾಧಿಕಾರಿಯು ಹಿರಿಯ ಪೊಲೀಸ್ ಅಧಿಕಾರಿಗಳ ಗಮನಕ್ಕೆ ತರುವುದು.

7. ಪ್ರತಿಯೊಂದು ಪ್ರಥಮ ವರ್ತಮಾನ ವರದಿಯಲ್ಲಿ ಕಳುವಾಗಿರುವ ಒಡವೆಗಳು/ವಸ್ತುಗಳ ಪೂರ್ಣ ಮಾಹಿತಿಯನ್ನು ಪಟ್ಟಿ ಮಾಡಿಕೊಳ್ಳುವುದು.

8. ಕಳವು ಮಾಲನ್ನು ಅಮಾನತ್ತುಪಡಿಸಿಕೊಳ್ಳಲು ಆರೋಪಿ ಮತ್ತು ಪಂಚರ ಜೊತೆ ತನಿಖಾಧಿಕಾರಿಯು ಹೋಗುವಾಗ ಕಡ್ಡಾಯವಾಗಿ ಸಮವಸ್ತ್ರ ಧರಿಸಿರಬೇಕು ಹಾಗೂ ನಾಮಫಲಕ ಕಾಣುವಂತಿರಬೇಕು.

9. ಆರೋಪಿತನು ಕಳವು ಮಾಲನ್ನು ಸ್ವೀಕರಿಸಿದ ವ್ಯಕ್ತಿ/ಅಂಗಡಿಯನ್ನು ತೋರಿಸಿ ಹಾಜರುಪಡಿಸಿದ ಬಗ್ಗೆ ನೀಡಿದ ಸ್ವ-ಇಚ್ಛಾ ಹೇಳಿಕೆಯನ್ನು ಆಧರಿಸಿ ಪಂಚರನ್ನು ಹಾಜರುಪಡಿಸಿಕೊಂಡು ಅವರಿಗೆ ಪೂರ್ಣ ವಿವರವನ್ನು ಆರೋಪಿತನಿಂದಲೇ ಹೇಳಿಸುವುದು.

10. ಪಂಚರಿಗೆ ತನಿಖಾಧಿಕಾರಿಯು ಯಾವ ಪ್ರಕರಣಗಳಲ್ಲಿ ವಸ್ತು/ಒಡವೆಗಳನ್ನು ಅಮಾನತ್ತು ಪಡಿಸಿಕೊಳ್ಳಬೇಕಾಗಿದೆ ಮತ್ತು ಪಂಚರು ಹಾಜರಿರುವ ಬಗ್ಗೆ ನೋಟೀಸನ್ನು ಜಾರಿ ಮಾಡಿ ಅವರ ಸಹಿಯನ್ನು ಪಡೆದುಕೊಳ್ಳುವುದು.

11. ಆರೋಪಿತನು ಕಳವು ಮಾಲನ್ನು ಮಾರಾಟ ಮಾಡಿದ, ಗಿರಿವಿ ಇಟ್ಟಿದ್ದ ಅಂಗಡಿಯು ಬೇರೆ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ್ದಲ್ಲಿ ಆ ಪೊಲೀಸ್ ಠಾಣೆಯ ಠಾಣಾಧಿಕಾರಿಯವರಿಗೆ ಮಾಹಿತಿ ನೀಡುವುದು.

12. ಪಂಚರು ಮತ್ತು ತನಿಖಾಧಿಕಾರಿಗೆ ಆರೋಪಿತನು ತಾನು ಕಳವು ಮಾಲನ್ನು ನೀಡಿದ ವ್ಯಕ್ತಿ/ಅಂಗಡಿಯನ್ನು ತೋರಿಸಿದಾಗ ಅಂಗಡಿಯನ್ನು ಪ್ರವೇಶಿಸುವ ಸಮಯದಲ್ಲಿಯೇ ವಿಡಿಯೋಗ್ರಾಫಿಯನ್ನು ಪ್ರಾರಂಭಿಸಬೇಕು.

13. ಕಳವು ಮಾಲನ್ನು ಸ್ವೀಕರಿಸಿದ ವ್ಯಕ್ತಿಯನ್ನು ಅರೋಪಿತನು ಗುರುತಿಸಿ ತಾನು ಈ ಹಿಂದೆ ಮಾರಾಟ ಮಾಡಿದ ವಸ್ತು/ಒಡವೆಗಳನ್ನು ಹಿಂತಿರುಗಿಸುವಂತೆ ತಿಳಿಸಿದಾಗ ಕಳವು ಮಾಲನ್ನು ಸ್ವೀಕರಿಸಿದ ವ್ಯಕ್ತಿಯಿಂದ ಸದರಿ ಮಾಹಿತಿಯನ್ನು ಖಚಿತಪಡಿಸಿಕೊಳ್ಳಬೇಕು.

14. ಅಂಗಡಿಯಲ್ಲಿ ಸಿ.ಸಿ. ಟಿವಿ ಅಳವಡಿಸಿದ್ದಲ್ಲಿ ಅದರ ಸಂಗ್ರಹಣೆಯನ್ನು ಖಚಿತಪಡಿಸಿಕೊಂಡು ಮಾಹಿತಿಯನ್ನು ಪಡೆಯುವುದು.

15. ಪ್ರಥಮ ವರ್ತಮಾನ ವರದಿಯಲ್ಲಿ ನಮೂದಾದ ಒಡವೆ/ವಸ್ತುಗಳ ಪೂರ್ಣ ವಿವರವನ್ನು ಒಳಗೊಂಡ ನೋಟೀಸನ್ನು ಸ್ಥಳದಲ್ಲಿಯೇ ಕಳವು ಸ್ವತ್ತನ್ನು ಸ್ವೀಕರಿಸಿದವರಿಗೆ ಪ್ರಥಮ ವರ್ತಮಾನ ವರದಿಯನ್ನು ಲಗತ್ತಿಸಿ ನೀಡುವುದು.

16. ಅಮಾನತ್ತು ಪಡಿಸಿಕೊಳ್ಳುವ ವಸ್ತು/ಒಡವೆ ಗುಣಮಟ್ಟ ಮತ್ತು ತೂಕವನ್ನು ಮಾಡಿದ ವ್ಯಕ್ತಿಯ ಸಹಿಯನ್ನು ಪಡೆದುಕೊಳ್ಳುವುದು ಹಾಗೂ ಆತನನ್ನು ಸಾಕ್ಷಿಯಾಗಿ ಪರಿಗಣಿಸುವುದು.

17. ಅಮಾನತ್ತು ಪಡಿಸಿಕೊಳ್ಳುವಾಗ ಸ್ಥಳದಲ್ಲಿಯೇ ಪಂಚನಾಮೆಯನ್ನು ಮಾಡಿ ಕಳವು ಮಾಲನ್ನು ಸ್ವೀಕರಿಸಿದ ವ್ಯಕ್ತಿಯ ಹಾಗೂ ಪಂಚರ ಸಹಿಯನ್ನು ಪಡೆಯುವುದು.

18. ಅಮಾನತ್ತು ಪಡಿಸಿಕೊಂಡ ವಸ್ತು/ಒಡವೆ ಅಮಾನತ್ತು ಚೀಟಿಗಳನ್ನು ಅದೇ ದಿನ ಪಂಚನಾಮೆ ಜೊತೆ ಠಾಣೆಗೆ ಬಂದು ಠಾಣಾ ಮಾಲುಪಟ್ಟಿಯಲ್ಲಿ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ಮುಂದಿನ ಆದೇಶಕ್ಕಾಗಿ ಹಾಜರುಪಡಿಸುವುದು.

---

HD/27/PCQ/2023

(ಡಾ:ಜಿ.ಪರಮೇಶ್ವರ)
ಗೃಹ ಸಚಿವರು